ಸಮಾಜದ ಮುಖ್ಯವಾಹಿನಿಗೆ ತರುವಲ್ಲಿ ಸದರಿ ಯೋಜನೆಯು ಸಹಾಯಕವಾಗಿದೆ.

3) ಆಮ್ ಆದ್ಮಿ ಭೀಮಾ ಯೋಜನೆ

ಕೇಂದ್ರ ಹಾಗೂ ರಾಜ್ಯ ಸರ್ಕಾರದ ವತಿಯಿಂದ ಬಡತನ ರೇಖೆಗಿಂತ ಕೆಳಗಿರುವ ಗ್ರಾಮೀಣ ಭೂರಹಿತ ಕುಟುಂಬಗಳಿಗೆ ಜೀವ ವಿಮೆ ಒದಗಿಸುವ ಯೋಜನೆಯಾಗಿದ್ದು, ಈ ಯೋಜನೆಯು ದಿ: 01.04.2013 ರಿಂದ ಜಾರಿಗೆ ಬಂದಿರುತ್ತದೆ. ಸದರಿ ಯೋಜನೆಯು ಪ್ರಿಮಿಯಂ ಮೊತ್ತ ₹ 200/– ನ್ನು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಸಮವಾಗಿ ಭರಿಸುತ್ತವೆ. ಸದರಿ ಯೋಜನೆಯಿಂದ 18 ರಿಂದ 59 ವರ್ಷದೊಳಗಿನ ಬಿಪಿಎಲ್ ಕಾರ್ಡ ಹೊಂದಿರುವ ಭೂ ರಹಿತ ಕುಟುಂಬಗಳ ಮುಖ್ಯಸ್ಥರಿಗೆ ಹಾಗೂ ಎರಡು ಮಕ್ಕಳನ್ನು ಹೊಂದಿರುವ ಕುಟುಂಬದವರಿಗೆ ಮತ್ತು ಎನ್ಆರ್ಇಜಿಎಸ್ ರಡಿ ನೀಡಿರುವ ಜಾಬ್ಕಾರ್ಡ ಹಾಗೂ ಇತರೆ ಕಸಬುದಾರರ ದೃಢೀಕೃತ ಪತ್ರ ಹೊಂದಿರುವವರಿಗೆ ಈ ಯೋಜನೆಯಿಂದ ಅನುಕೂಲವಾಗುವುದು.

ಕ್ರೀಡಾಪಟುಗಳಿಗೆ ರೂಪಿಸಿರುವ ಯೋಜನೆಗಳು

351(624);. ಶ್ರೀ ಐಹೊಳೆ.ಡಿ. ಮಹಾಲಿಂಗಪ್ಪ (ರಾಯಭಾಗ)

ಅ) ರಾಜ್ಯದಲ್ಲಿ ಕ್ರೀಡಾಪಟುಗಳಿಗೆ ರೂಪಿಸಿರುವ ಯೋಜನೆಗಳಾವುವು, ಅವುಗಳ ರೂಪುರೇಷೆಗಳೇನು (ಯೋಜನಾವಾರು ವಿವರ ಒದಗಿಸುವುದು);

ಆ) ಸರ್ಕಾರಿ ನೌಕರಿಯಲ್ಲಿರುವ ಕ್ರೀಡಾಪಟುಗಳಿಗೆ ವಿಶೇಷ ಸೌಲಭ್ಯಗಳೇನಾದರು ಸರ್ಕಾರ ಕಲ್ಪಿಸಿದೆಯೇ (ವಿವರ ಒದಗಿಸುವುದು);

ಇ) ರಾಜ್ಯದಲ್ಲಿ ಎಷ್ಟು ಅಸಹಾಯಕ ಕ್ರೀಡಾಪಟುಗಳನ್ನು ಸರ್ಕಾರ ಗುರುತಿಸಿದೆಯೇ; ಸದರಿ ಕ್ರೀಡಾಪಟುಗಳ ನೆರವಿಗೆ ಸರ್ಕಾರ

ತೆಗೆದುಕೊಂಡಿರುವ ಕ್ರಮಗಳೇನು (ಪ್ರಕರಣವಾರು ವಿವರ ಒದಗಿಸುವುದು)?

ಶ್ರೀ ಕೆ.ಅಭಯಚಂದ್ರ (ಮಾನ್ಯ ಯುವಜನ ಸೇವಾ ಹಾಗೂ ಮೀನುಗಾರಿಕೆ ಸಚಿವರು)

ಅ) ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಕ್ರೀಡಾಪಟುಗಳಿಗಾಗಿ ರೂಪಿಸಿರುವ ಯೋಜನೆಗಳ ವಿವರ:

1. ನಗದು ಪುರಸ್ಕಾರ ಯೋಜನೆ: ರಾಷ್ಟ್ರ ಮಟ್ಟದಲ್ಲಿ ಪದಕ ವಿಜೇತ ಮತ್ತು ಅಂತರರಾಷ್ಟ್ರ ಮಟ್ಟದಲ್ಲಿ ಭಾಗವಹಿಸಿದ ಕರ್ನಾಟಕದ ಕ್ರೀಡಾಪಟುಗಳಿಗೆ ಕ್ರೀಡಾ ಚಟುವಟಿಕೆಗಳಿಗೆ ಪ್ರೋತ್ಸಾಹ (ನಗದು ಪ್ರಶಸ್ತಿ).

2. ಕರ್ನಾಟಕ ಸ್ಪೋರ್ಟ್ಸ್ ಅಕಾಡಮಿ ಫಾರ್ ವಿಕ್ಟಲೆನ್ಸ್: ಅಂತರರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಭಾಗವಹಿಸುವ ಕ್ರೀಡಾಪಟುಗಳಿಗೆ ಉನ್ನತ ಮಟ್ಟದ ಕ್ರೀಡಾ ತರಬೇತಿ ಪಡೆಯಲು ಧನಸಹಾಯ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

3. ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡಮಿ: ಯುವಜನರ ಸಾಹಸ ಪ್ರವೃತ್ತಿಯನ್ನು ಉತ್ತೇಜಿಸಲು ಭೂ ಸಾಹಸ, ಜಲಸಾಹಸ ಮತ್ತು ವಾಯು ಸಾಹಸ ತರಬೇತಿ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ.

4. ಕರ್ನಾಟಕ ಕ್ರೀಡಾ ಪ್ರಾಧಿಕಾರ: ಕ್ರೀಡಾ ಕೂಟಗಳನ್ನು ಆಯೋಜಿಸಲು ರಾಜ್ಯ ಕ್ರೀಡಾ ಸಂಸ್ಥೆಗಳಿಗೆ ಅನುದಾನ ನೀಡಿ ಕ್ರೀಡಾ ಉತ್ತೇಜನಕ್ಕೆ ಅಗತ್ಯ ಸಹಯೋಗ ನೀಡಲಾಗುತ್ತಿದೆ.

5. ಯುವ ಕ್ರೀಡಾ ಸಂಜೀವಿನಿ: ರಾಜ್ಯದ ಕ್ರೀಡಾ ಶಾಲೆಯ ವಿದ್ಯಾರ್ಥಿಗಳಿಗೆ, ರಾಜ್ಯ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳಿಗೆ ವಿಮಾ ಸುರಕ್ಷೆಯನ್ನು ಒದಗಿಸಲಾಗುತ್ತಿದೆ.

6. ಗ್ರಾಮೀಣ ಕ್ರೀಡೋತ್ಸವ : 2014–15 ನೇ ಸಾಲಿನಿಂದ ಗ್ರಾಮೀಣ ದೇಸೀ ಕ್ರೀಡೆಗಳನ್ನು ಉತ್ತೇಜಿಸಲು ಗ್ರಾಮೀಣ ಕ್ರೀಡೋತ್ಸವಗಳನ್ನು ತಾಲ್ಲೂಕು ಮಟ್ಟದಲ್ಲಿ ಆಯೋಜಿಸಲಾಗುತ್ತಿದೆ.

7. ಸಿ.ಇ.ಟಿ: ರಾಜ್ಯದಲ್ಲಿ ಕ್ರೀಡಾಪಟುಗಳಿಗೆ ಸಿ.ಇ.ಟಿ ಪ್ರವೇಶ ಪರೀಕ್ಷೆಯಲ್ಲಿ ಕ್ರೀಡಾ ಮೀಸಲಾತಿ ಅಡಿಯಲ್ಲಿ ಇಂಜಿನಿಯರಿಂಗ್, ವೈದ್ಯಕೀಯ ಮತ್ತು ಮುಂತಾದ ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

8. ಶೈಕ್ಷಣಿಕ ಶುಲ್ಕ ಮರು ಪಾವತಿ ಯೋಜನೆ: 2013–14ನೇ ಸಾಲಿನಲ್ಲಿ ನೂತನ ಯೋಜನೆಗಾಗಿ ಅನುಷ್ಠಾನಗೊಳಿಸುತ್ತಿರುವ ಈ ಯೋಜನೆಯಡಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಸಾಧನೆ ಮಾಡಿದ ಪಿ.ಯು.ಸಿ. ಯಿಂದ ಸ್ನಾತಕೋತ್ತರ ಪದವಿಯವರೆಗೆ ಈಜು ಮತ್ತು ಜಿಮ್ನಾಸ್ಟಿಕ್ಸ್ ಕ್ರೀಡೆಯಲ್ಲಿ 5 ನೇ ತರಗತಿಯಿಂದ ಸ್ನಾತಕೋತ್ತರ ಪದವಿಯವರೆಗೆ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಶುಲ್ಕ ಮರುಪಾವತಿಸಲಾಗುತ್ತಿದೆ

9. ಕ್ರೀಡಾಶಾಲೆ/ನಿಲಯ: ರಾಜ್ಯದಲ್ಲಿ 23 ಜಿಲ್ಲೆಗಳಲ್ಲಿ ರಾಜ್ಯಮಟ್ಟದ ಕ್ರೀಡಾಶಾಲೆಗಳನ್ನು ಹಾಗೂ 2 ರಾಜ್ಯಮಟ್ಟದ ಕ್ರೀಡಾ ವಸತಿ ಶಾಲೆಗಳು ಹಾಗೂ 5 ಕ್ರೀಡಾ ನಿಲಯಗಳನ್ನು ನಡೆಸಲಾಗುತ್ತಿದೆ.

10. ಒಳಾಂಗಣ ಚಟುವಟಿಕೆ: ಯುವಜನತೆಯಲ್ಲಿ ಸುಪ್ತವಾಗಿರುವ ಕಲೆ, ಸಾಹಿತ್ಯ, ಸಂಗೀತ ಇತ್ಯಾದಿ ಸಾಂಸ್ಕೃತಿಕ ಪ್ರತಿಭೆಗಳನ್ನು ಪ್ರೋತ್ಸಾಹಿಸಲು ಹಾಗೂ ಯುವಜನತೆಗೆ ಸಂಬಂಧಿಸಿದ ಸಮಸ್ಯೆಗಳು, ಆಸಕ್ತಿ ವಿಷಯಗಳು ಹಾಗೂ ಹವ್ಯಾಸಗಳ ಬಗ್ಗೆ ಚಿಂತನೆ ಮಂಥನಗಳಿಗೆ ಸಂಬಂಧಿಸಿದಂತೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಒಳಾಂಗಣ ಚಟುವಟಿಕೆ ಅಡಿಯಲ್ಲಿ ಇಲಾಖೆಯಿಂದ ಲಭ್ಯವಿರುವ ಸೌಲಭ್ಯಗಳನ್ನು ನೀಡಲಾಗುತ್ತಿದೆ.

11. ಯುವ ಕರ್ನಾಟಕ: ಯುವಜನರ ಭಾವನೆಗಳನ್ನು ಮತ್ತು ಚಿಂತನೆಗಳನ್ನು ಪ್ರತಿಬಿಂಬಿಸಲು ಇಲಾಖೆಯು ಯುವ ಕರ್ನಾಟಕ ಮಾಸ ಪತ್ರಿಕೆಯನ್ನು ಪ್ರಕಟಿಸುತ್ತಿದೆ.

12. ಪ್ರದರ್ಶನಗಳು ಮತ್ತು ಪ್ರಚಾರ ಆಂದೋಲನ ಕಾರ್ಯಕ್ರಮ: ಇಲಾಖೆ ಕಾರ್ಯ ಚಟುವಟಿಕೆಗಳನ್ನು ಬ್ರೋಚರ್ ಪ್ರಕಟಣೆ, ಟ್ಯಾಬ್ಲೋ ಪ್ರದರ್ಶನ, ಕಿರುಚಿತ್ರ ತಯಾರಿಕೆ, ಮುಂತಾದ ಮಾಧ್ಯಮಗಳ ಮೂಲಕ ಯುವಜನತೆಗೆ ತಲುಪಿಸುವ ಕಾರ್ಯವನ್ನು ಈ ಯೋಜನೆ ಅಡಿಯಲ್ಲಿ ಹಮ್ಮಿಕೊಳ್ಳಲಾಗುತ್ತಿದೆ.

13. ಯುವ ಚೇತನಾ: ಯುವಜನರಲ್ಲಿ ವ್ಯಕ್ತಿತ್ವ ಮತ್ತು ಹೊಸ ಕೌಶಲ್ಯಗಳನ್ನು ಬೆಳೆಸಿ ಅವರಲ್ಲಿ ಅರಿವು, ಆತ್ಮಸ್ಥೈರ್ಯಗಳನ್ನು ರೂಪಿಸಲು ಯುವ ಚೇತನಾ ಎಂಬ ತರಬೇತಿಯನ್ನು ನೀಡಲಾಗುವುದು.

14. ಯುವ ಪ್ರೇರಣಾ: ಯುವಜನರನ್ನು ಸ್ವತಃ ಉದ್ಯೋಗಿಗಳನ್ನಾಗಿಸುವಂತೆ ಪ್ರೋತ್ಸಾಹಿಸಲು ಅವರಿಗೆ ಅಗತ್ಯವಾದ ತರಬೇತಿ ನೀಡಲು ಯುವ ಪ್ರೇರಣಾ ಎಂಬ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ.

15. ಯುವ ಸಂವಹನಾ: ಯುವಜನರಲ್ಲಿ ನಾಯಕತ್ವ ಬೆಳವಣಿಗೆ, ವ್ಯಕ್ತಿತ್ವ ವಿಕಾಸ ಮತ್ತು ಸಂಘಟನೆ ಅರಿವನ್ನು ಮೂಡಿಸಲು ಅಗತ್ಯ ಸಂವಹನಾ ಕೌಶಲ್ಯಗಳನ್ನು ವೃದ್ಧಿಗೊಳಿಸಲು ಯುವ ಸಂವಹನಾ ಎಂಬ ತರಬೇತಿ ಶಿಬಿರವನ್ನು ನಡೆಸಲಾಗುತ್ತಿದೆ.

16. ಏಕಲವ್ಯ ಪ್ರಶಸ್ತಿ : ಕರ್ನಾಟಕ ರಾಜ್ಯವನ್ನು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರತಿನಿಧಿಸಿ ವಿಶೇಷ ಸಾಧನೆಗೈದ ಕ್ರೀಡಾಪಟುಗಳಿಗೆ ಪ್ರತಿ ವರ್ಷ ಏಕಲವ್ಯ ಪ್ರಶಸ್ತಿ ನೀಡಿ ಪ್ರೋತ್ಸಾಹಿಸಲಾಗುತ್ತಿದೆ.

17. ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟ: ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸರ್ಕಾರಿ ನೌಕರರಲ್ಲಿ ಕ್ರೀಡಾ ಮನೋಭಾವ ಬೆಳೆಸಲು ಇಲಾಖೆಯು ಪ್ರತಿ ವರ್ಷ ಜಿಲ್ಲೆ ಮತ್ತು ರಾಜ್ಯಮಟ್ಟದಲ್ಲಿ ಸರ್ಕಾರಿ ನೌಕರರ ಕ್ರೀಡಾಕೂಟಗಳನ್ನು ಏರ್ಪಡಿಸುತ್ತಿದೆ.

18. ಶಾಸಕರ ಕ್ರೀಡಾಕೂಟ: ರಾಜ್ಯದ ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಸದಸ್ಯರಿಗೆ ಕ್ರೀಡೆಗಳಲ್ಲಿ ಹೆಚ್ಚಿನ ಆಸಕ್ತಿಯನ್ನು ಮೂಡಿಸಲು ಹಾಗೂ ಕ್ರೀಡಾ ಪ್ರತಿಭೆ ಇರುವ ಸದಸ್ಯರ ಕ್ರೀಡಾ ಪ್ರತಿಭೆಗಳನ್ನು ಹೊರತರಲು ಬೆಳೆಸಲು ಇಲಾಖೆಯ ವತಿಯಿಂದ ಪ್ರತಿ ವರ್ಷ ಶಾಸಕರ ಕ್ರೀಡಾಕೂಟವನ್ನು ಸಂಘಟಿಸಲಾಗುತ್ತದೆ.

ಆ)

1. ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಪಂದ್ಯಾವಳಿಗಳಲ್ಲಿ ಭಾಗವಹಿಸುವ ನೌಕರ ಕ್ರೀಡಾಪಟುಗಳಿಗೆ ಕ್ರೀಡಾಕೂಟದಲ್ಲಿ ಭಾಗವಹಿಸುವ ಅವಧಿಯಲ್ಲಿ ವಿಶೇಷ ಸಾಂದರ್ಭಿಕ ರಜಾ ಸೌಲಭ್ಯವನ್ನು ಮಂಜೂರು ಮಾಡಲಾಗುವುದು. ಕ್ರೀಡಾಕೂಟದಲ್ಲಿ ಭಾಗವಹಿಸಲು ಪ್ರಯಾಣ ಭತ್ಯೆ/ದಿನಭತ್ಯೆ ಮಂಜೂರು ಮಾಡಲಾಗುವುದು.

2. ಅಖಿಲ ಭಾರತ ನಾಗರೀಕ ಸೇವಾ ಪಂದ್ಯಾವಳಿಗಳಲ್ಲಿ ಭಾಗವಹಿಸಲು ನಿಯಮಾನುಸಾರ ಪ್ರಯಾಣ ಭತ್ಯೆ/ದಿನಭತ್ಯೆ ಮಂಜೂರು ಮಾಡಲಾಗುವುದು.

3. ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ/20/ಎಸ್‌ಆರ್‌ಎಸ್/86 ದಿನಾಂಕ: 21–07–1986 ಅನ್ವಯ ಮಾನ್ಯತೆ ಪಡೆದ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಕ್ರೀಡಾಕೂಟದಲ್ಲಿ ಭಾಗವಹಿಸಿ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನ ಪಡೆದ ಸರ್ಕಾರಿ ನೌಕರ ಕ್ರೀಡಾಪಟುಗಳಿಗೆ ಸೇವೆಯಲ್ಲಿ ಒಟ್ಟು ಮೂರು ವಾರ್ಷಿಕ ವೇತನ ಬಡ್ತಿ ಮಂಜೂರು ಮಾಡಲಾಗುತ್ತಿದೆ.

ಇ)

1. ಕಷ್ಟ ಪರಿಸ್ಥಿತಿಯಲ್ಲಿರುವ 50 ವರ್ಷ ಮೀರಿದ ನಿವೃತ್ತ ಹಾಗೂ ವಾರ್ಷಿಕ 20 ಸಾವಿರಗಳ ಆದಾಯಕ್ಕಿಂತ ಕಡಿಮೆ ಇರುವ ಮಾಜಿ ಕ್ರೀಡಾಪಟುಗಳಿಗೆ ಈ ಕೆಳಗಿನಂತೆ ಮಾಸಾಶನ ಮಂಜೂರು ಮಾಡಲಾಗುತ್ತಿದೆ.

ವಿವರ	ಪ್ರಸ್ತುತ ನೀಡಲಾಗುತ್ತಿರುವ ಮಾಸಾಶನ	2014–15ನೇ ಸಾಲಿನಲ್ಲಿ ಆಯವ್ಯಯದಲ್ಲಿ ಘೋಷಿಸಿದ ಮೊತ್ತ
ರಾಜ್ಯ ಮಟ್ಟ	₹ 750/–	₹ 1500/–
ರಾಷ್ಟ್ರ ಮಟ್ಟ	₹ 1000/–	₹ 2000/–
ಅಂತರರಾಷ್ಟ್ರ ಮಟ್ಟ	₹ 1500/–	₹ 3000/–
ಮಾಜಿ ಕ್ರೀಡಾ ಪಟುಗಳಿಗೆ		
ರಾಜ್ಯ ಮಟ್ಟ	₹ 750/–	₹ 1000–00
ರಾಷ್ಟ್ರ ಮಟ್ಟ	₹ 1000/–	₹ 1500–00
ಅಂತರರಾಷ್ಟ್ರ ಮಟ್ಟ	₹ 1500/–	₹ 2000–00

2. ಭಿನ್ನ ಸಾಮರ್ಥ್ಯದ ಕ್ರೀಡಾಪಟುಗಳಿಗೆ ಕ್ರೀಡಾಕೂಟಗಳನ್ನು ಸಂಘಟಿಸಲು ಮಾನ್ಯತೆ ಪಡೆದ ರಾಜ್ಯ ಕ್ರೀಡಾ ಸಂಸ್ಥೆಗಳಿಗೆ ಕರ್ನಾಟಕ ಕ್ರೀಡಾ ಪ್ರಾಧಿಕಾರದಿಂದ ಅನುದಾನ ಬಿಡುಗಡೆ ಮಾಡಲಾಗುತ್ತಿದೆ. ಕ್ರೀಡಾಕೂಟಗಳ ಆಯೋಜನೆ, ಕ್ರೀಡಾಪಟುಗಳಿಗೆ ತರಬೇತಿ ಶಿಬಿರ ಮತ್ತು ರಾಜ್ಯ ತಂಡವನ್ನು ಕ್ರೀಡಾಕೂಟಗಳಿಗೆ ನಿಯೋಜಿಸಲು ದಿನಭತ್ಯೆ, ಪ್ರಯಾಣ ಭತ್ಯೆ ಮತ್ತು ಕ್ರೀಡಾ ಕಿಟ್ ಒದಗಿಸಲು ಅನುದಾನವನ್ನು ನೀಡಲಾಗುತ್ತಿದೆ.

3. ಬಡ ಮತ್ತು ಕಷ್ಟಪರಿಸ್ಥಿತಿಯಲ್ಲಿರುವ ಕ್ರೀಡಾಪಟುಗಳಿಗೆ, ಭಿನ್ನ ಸಾಮರ್ಥ್ಯದ ಕ್ರೀಡಾಪಟುಗಳಿಗೆ ನಿಯಮಾನುಸಾರ ಇಲಾಖೆಯ ಎಲ್ಲಾ ಕಾರ್ಯಕ್ರಮಗಳಲ್ಲಿ ಆದ್ಯತೆಯ ಮೇಲೆ ಅವಕಾಶಗಳನ್ನು ಒದಗಿಸಲಾಗುತ್ತಿದೆ.

ಗೋರಬಾಳ ಪಂಪ್ ಚಾನಲ್‌ನ ಕಾಮಗಾರಿ

352 (616); ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು)

ಅ) ತುಂಗಭದ್ರಾ ಎಡದಂಡೆಯ ಸಿಂಧನೂರು ತಾಲ್ಲೂಕಿನ ಗೋರೆಬಾಳ ಪಿಕಪ್ ಫೀಡರ್ ಚಾನಲ್‌ನ ಕಾಮಗಾರಿ ಕುಂಠಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇದರಿಂದಾಗಿ ಈ ಭಾಗದ ರೈತಾಪಿ ಜನರು ನೀರಿನ ಕೊರತೆ ಅನುಭವಿಸುತ್ತಿರುವುದು ನಿಜವೇ;

ಇ) ಕಾಮಗಾರಿ ವಿಳಂಬದಿಂದ ಜನ, ಜಾನುವಾರು, ಕೃಷಿಗೆ ತೊಂದರೆವುಂಟಾಗಿರುವ ಬಗ್ಗೆ ಸರ್ಕಾರದ ನಿಲುವೇನು; ಸಂಕಷ್ಟದಲ್ಲಿರುವ ರೈತರ ನೆರವಿಗೆ ಸರ್ಕಾರ ಮುಂದಾಗುವುದೇ; (ವಿವರ ನೀಡುವುದು)

ಈ) ಹಾಗಿದ್ದಲ್ಲಿ, ಸದರಿ ಕಾಮಗಾರಿ ಪ್ರಾರಂಭಗೊಂಡಿದ್ದು ಯಾವಾಗ ಪ್ರಸಕ್ತ ಕಾಮಗಾರಿ ಯಾವ ಹಂತದಲ್ಲಿದೆ (ಕಾಮಗಾರಿಯ ಪ್ರಗತಿಯ ವಿವರಗಳನ್ನು ಒದಗಿಸುವುದು);

ಉ) ಹಾಗಿದ್ದಲ್ಲಿ ಯಾವಾಗ ಕಾಮಗಾರಿಯನ್ನು ಪೂರ್ಣಗೊಳಿಸಲಾಗುತ್ತದೆ; ಇದಕ್ಕೆ ಕಾಲಮಿತಿಯನ್ನು ಹಾಕಿ ಕೊಳ್ಳಲಾಗಿದೆಯೇ (ವಿವರ ನೀಡುವುದು)?